1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 172/2022

ಆರೋಪಿಯನ್ನು ವಿ.ಸಿ ಮುಖಾಂತರ ಹಾಜರು ಪಡಿಸಲಾಯಿತು.

ದಿನಾಂಕ ಃ 02.12.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 24 ಪಿ. ಡಬ್ಲ್ಯೂ:16

| | |
|---|---|
| ಸಾಕ್ಷಿದಾರರ ಹೆಸರು | ಮಲ್ಲಿಕಾರ್ಜುನ ಪೂಜಾರ್ |
| ತಂದೆಯ ಹೆಸರು | ಮಲ್ಲಪ್ಪ |
| ವಯಸ್ಸು | 27 ವರ್ಷ |
| ಉದ್ಯೋಗ | ಪೊಲೀಸ್ ಪೇದೆ, ಕೆಸ್ತೂರು ಪೊಲೀಸ್ ಠಾಣೆ. |
| ವಾಸ | ಕೆಸ್ತೂರು. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಡಿಸೆಂಬರ್ 2021 ರಿಂದ ಆಗಸ್ಟ್ 2025 ರ ತನಕ ನಾನು ಬೆಳಕವಾಡಿ ಪೊಲೀಸ್ ಠಾಣೆ ಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿಃ 16.08.2022 ರಂದು ಬೆಳಕವಾಡಿ ಠಾಣೆಯ ಪಿ.ಎಸ್.ಐ ರವರು ಈ ಪ್ರಕರಣದ ಸಂಬಂಧದಲ್ಲಿ ಅಮಾನತ್ತು ಪಡಿಸಿಕೊಂಡು ಸೀಲು ಮಾಡಲಾದ 7 ವಸ್ತುಗಳನ್ನು ಎಫ್.ಎಸ್.ಎಲ್ ಮೈಸೂರಿನವರಿಗೆ ನೀಡುವಂತೆ ನಿರ್ದೇಶನ ನೀಡಿದ್ದ ಮೇರೆಗೆ ಸದರಿ ವಸ್ತುಗಳನ್ನು ಪಡೆದುಕೊಂಡು FSL ಮೈಸೂರುವವರಿಗೆ ನೀಡಿ ಸ್ವೀಕೃತಿಯನ್ನು ತಂದು ಪಿಎಸ್ಐ ರವರ ಮುಂದೆ ಹಾಜರು ಪಡಿಸಿರುತ್ತೇನೆ.
3. ಸಾಕ್ಷಿಯು ಸ್ವೀಕೃತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.40 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಕೆ.ಟಿ.ಎಸ್. ವಕೀಲರು chief defence counsel ರವರಿಂದ ಃ**

4. ಸದರಿ ವಸ್ತುಗಳನ್ನು FSL ಗೆ ಹಾಜರು ಪಡಿಸುವ ಸಲುವಾಗಿ ನಿರ್ದೇಶನವನ್ನು ನೀಡಿದ್ದರೆ ಎಂದರೆ ಸಾಕ್ಷಿಯು, passport ನಲ್ಲಿ ನಮೂದು ಇದೆ ಎಂದು ನುಡಿಯುತ್ತಾರೆ. ಸದರಿ ವಸ್ತುಗಳನ್ನು ನಾನು ಪಡೆಯುವ ಸಮಯದಲ್ಲಿ ಅವು ಪೊಲೀಸ್ ಠಾಣೆಯಲ್ಲಿ ಇದ್ದವು

ಅವುಗಳನ್ನು ತನಿಖಾಧಿಕಾರಿಯಿಂದ ನಾನು ಪಡೆದಿರುತ್ತೇನೆ. ಯಾವ ಪೊಲೀಸ್ ಠಾಣೆಯಲ್ಲಿ ಅವುಗಳು ಇದ್ದವೆಂದು ನನಗೆ ನೆನಪಾಗುತ್ತಿಲ್ಲ.

**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.